**ದಿಃ 28-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಜಿ ಜಿ ವಕೀಲರಿಂದ**

ದಾವಾ ಆಸ್ತಿತಗಳು ವಾದಿಯ ಪಿತ್ರಾರ್ಜಿತ ಅಥವಾ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸಾಕ್ಷಿ ನಮ್ಮ ಆಸ್ತಿಗಳು ಎನ್ನುತ್ತಾರೆ. ನನ್ನ ಪ್ರಮಾಣ ಪತ್ರ ಹಾಗೂ ತಕರಾರಿನಲ್ಲಿ ಶಾಂತವ್ವ ನಮ್ಮ ತಂದೆಯ ಸೋದರ ಮಾವನ ಮಗಳು ಎಂದು ನಮ್ಮ ತಂದೆ ಹೇಳುತ್ತಿದ್ದರು ಅಂದರೆ ಬರೆಸಿಲ್ಲ ಅಂದರೆ ಸರಿಯಲ್ಲ. ಈ ಬಗ್ಗೆ ಬರೆಸಿಲ್ಲ ಅಂದರೆ ಸರಿಯಲ್ಲ. ಶಾಂತವ್ವಳಿಗೆ ಲಗ್ನವಾದ ವಿಷಯ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಶಾಂತವ್ವಳ ಲಗ್ನವಾದ ಬಗ್ಗೆ ಬರೆಸಿಲ್ಲ ಅಂದರೆ ಸಾಕ್ಷಿ ನನಗೆ ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಶಾಂತವ್ವಳಿಗೆ ಲಗ್ನ ಆಗಿಲ್ಲ ಎಂದು ನನ್ನ ಪ್ರಮಾಣ ಪತ್ರದಲ್ಲಿ ಏಕೆ ಬರೆಸಿದ್ದೇನೆ ಹೇಳಲು ಬರುವುದಿಲ್ಲ.

ನಾನು ಬಿ ಗುಡಿಹಾಳ ಗ್ರಾಮದ ವಿಧಾನಸಭಾ ಕ್ಷೇತ್ರಕ್ಕೆ ಮತ ಚಲಾಯಿಸಿದ್ದೇನೆ. ನನ್ನ ಹೆಸರು ಮತದಾರರ ಯಾದಿಯಲ್ಲಿ ಇರುತ್ತದೆ. ಸಾಕ್ಷಿ ಕ್ರಮ ಸಂಖ್ಯೆ 708 ರಲ್ಲಿರುವ ಮತದಾರರ ಪಟ್ಟಿಯಲ್ಲಿರುವ ತನ್ನ ಫೋಟೋ ನೋಡಿ ಗುರುತಿಸಿರುತ್ತಾರೆ. ಮತದಾರರ ಯಾದಿಯನ್ನು ನಿಪಿ-11 ಎಂದು ಗುರುತಿಸಲಾಯಿತು. ನನಗೆ ಮತಚಲಾಯಿಸಲು ಅಧಿಕಾರ ಬಂದಾಗಿನಿಂದ ಅಲ್ಲಿ ಮತದಾನ ಮಾಡುತ್ತಿದ್ದೇನೆ. ನಿಪಿ-11 ರಲ್ಲಿರುವ ಮತದಾರರ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆ 706 ರಲ್ಲಿರುವ ಸುದಾ ಕೋಟಿ ನಮ್ಮ ತಾಯಿ. ಕ್ರಮ ಸಂಖ್ಯೆ 707 ಶಾಂತವ್ವ ಕೋಟಿ 1 ನೇ ಪ್ರತಿವಾದಿ ಹೆಸರು ಇರುತ್ತದೆ. ಕ್ರಮ ಸಂಖ್ಯೆ 709 ರಲ್ಲಿರುವ ಹೆಸರು ನನ್ನ ಹೆಂಡತಿಗೆ ಸೇರಿರುತ್ತದೆ. ಎಲ್ಲರ ಹೆಸರು ಮನೆ ನಂಬರ 100 ಇರುತ್ತದೆ. ಸಾಕ್ಷಿ ಶಾಂತವ್ವ ಕೋಟಿ ಎನ್ನುವವರು ಈಗ ಸೇರಿಸಿಕೊಂಡಿರುತ್ತಾರೆ ಅನ್ನುತ್ತಾರೆ. ಸಮಾರು 4-5 ವರ್ಷಗಳ ಹಿಂದೆ ಈ ವಿಷಯ ಗೊತ್ತಾಗಿರುತ್ತದೆ. ಈ ಬಗ್ಗೆ ನಮ್ಮ ಮನೆ ನಂಬರ ನಮೂದಿಸಿದ ಬಗ್ಗೆ ಚುನಾವಣಾಧಿಕಾರಿಗೆ ದೂರು ನೀಡಿಲ್ಲ. ಹೆಸರು ಖೊಟ್ಟಿಯಾಗಿ ನಮೂದಿಸಿದ್ದರೆ ಅಧಿಕಾರಿಗಳು ಹೆಸರು ತೆಗೆದುಹಾಕುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ನ್ಯಾಯಾಲಯದ ಸಮನ್ಸ ತೋರಿಸಲಾಗಿ ಅದರಲ್ಲಿ 1 ನೇ ಪ್ರತಿವಾದಿಗೆ ಸಮನ್ಸ ವಯಕ್ತಿಕವಾಗಿ ಜಾರಿ ಆದ ಬಗ್ಗೆ ಉಲ್ಲೇಖ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆ ನ್ಯಾಯಾಲಯದ ದಾಖಲೆ ಸಮನ್ಸ ಹಾಗೂ ಜಾರಿ ಆದ ವರದಿಯನ್ನು ನಿಪಿ-12 ಎಂದು ಗುರುತಿಸಲಾಯಿತು. ಸಾಕ್ಷಿಗೆ ಆಧಾರ ಕಾರ್ಡ ತೋರಿಸಿ ಅದು ಶಾಂತವ್ವಗೆ ಸೇರಿದ್ದು ಎಂದರೆ ಸಾಕ್ಷಿ ಅದನ್ನು ಹಚ್ಚಿಕೊಂಡಿದ್ದಾರೆ ಅದು ಮೂಲ ದಾಖಲೆ ಅಲ್ಲ ಅನ್ನುತ್ತಾರೆ. ಶಾಂತವ್ವಳ ಹಿರಿಯ ನಾಗರಿಕ ಕಾರ್ಡ ನೋಡಿ ಸಾಕ್ಷಿ ಇರಬಹುದು ಎನ್ನುತ್ತಾರೆ. ನಾನು ದಾಖಲೆಗಳನ್ನು ನೋಡಿದರೆ ಅವು ಮೂಲ ಅಥವಾ ಖೊಟ್ಟಿ ಎಂದು ಗೊತ್ತಾಗುವುದಿಲ್ಲ. ದಾಖಲೆಗಳು ಮೂಲ ಅಥವಾ ಖೊಟ್ಟಿ ಎನ್ನುವದು ಗೊತ್ತಾಗುವುದಿಲ್ಲ ಎಂದರೆ ಅದು ಖೊಟ್ಟಿ ಎಂದ ಯಾವ ಆದಾರದ ಮೇಲೆ ಹೇಳುತ್ತಿರುವಿರಿ ಸಾಕ್ಷಿ ಅವರ ಮಾಡಿಕೊಂಡಿರುವುದರಿಂದ ಹೇಳುತ್ತಿದ್ದೇನೆ

ಎನ್ನುತ್ತಾರೆ. ದಾಖಲೆಗಳನ್ನು ಯಾವಾ ಮಾಡಿಕೊಂಡಿದ್ದಾರೆ ಎನ್ನುವದು ಗೊತ್ತಿಲ್ಲ. ಈಗ ನೋಡಿದ ಬಳಿಕ ಗೊತ್ತಾಗಿರುತ್ತದೆ. ಈ ಮುಂಚೆ ಶಾಂತವ್ವಳ ಆಧಾರ ಕಾರ್ಡ ನಾನು ನೋಡಿಲ್ಲ. ಶಾಂತವ್ವ ಖೊಟ್ಟಿ ದಾಖಲೆ ಮಾಡಿಕೊಂಡಿರುವ ಬಗ್ಗೆ ನನ್ನ ತಕರಾರಿನಲ್ಲಿ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

ನನ್ನ ಕುಟುಂಬದ ವ್ಯವಹಾರದ ಬಗ್ಗೆ ಗೊತ್ತಿದೆ. ನನ್ನ ತಂದೆ ಕಲ್ಲಪ್ಪ ಸ್ವಾತಂತ್ರ ಹೋರಾಟಗಾರನಾಗಿದ್ದ ಅಂದರೆ ನಿಜ. ಸದರಿಯವರಿಗೆ ತಿಂಗಳಿಗೆ ರೂ 10 ಸಾವಿರ ಪಿಂಚಣಿ ಬರುತ್ತಿತ್ತು ಎನ್ನುವದು ನನಗೆ ಗೊತ್ತಿಲ್ಲ. ಸ್ವಾತಂತ್ರ ಹೋರಾಟಗಾರರಿಗೆ ಪಿಂಚಣಿ ಬರುತ್ತಿದೆ ಎನ್ನುವದು ಗೊತ್ತಿದೆ. ಎಷ್ಟು ಹಣ ಬರುತ್ತಿದೆ ಎನ್ನುವದು ಗೊತ್ತಿಲ್ಲ. ಕಲ್ಲಪ್ಪ ಮರಣ ಹೊಂದಿದ್ದಾರೆ. ಕಲ್ಲಪ್ಪನ ಮರಣಾನಂತರ ಆತನ ವಾರಸುದಾರರಿಗೆ ಪಿಂಚಣಿ ಬರುತ್ತಿದೆ ಎನ್ನುವದು ನನಗೆ ಗೊತ್ತಿಲ್ಲ. ನಾನು ಸಂಬಂಧ ಪಟ್ಟ ಕಚೇರಿಗೆ ಪಿಂಚಣಿ ಹಣದ ಬಗ್ಗೆ ಕೇಳಿಲ್ಲ. ನಮ್ಮ ತಂದೆಯ ಖಾತೆ ಇರುತ್ತದೆ. ಖಾತಾ ಪುಸ್ತಕ ನನ್ನ ಹತ್ತಿರ ಇರುತ್ತದೆ. ಖಾತೆಯಲ್ಲಿ ಹಣ ಇರುವುದು ನನಗೆ ಗೊತ್ತಿಲ್ಲ. ಖಾತೆ ಚಾಲ್ತಿಯಲ್ಲಿ ಇದೆ ಅಥವಾ ಬಂದಾಗಿದೆ ಎನ್ನುವ ಬಗ್ಗೆ ನಾನು ವಿಚಾರಿಸಿಲ್ಲ. ನಮ್ಮ ತಂದೆಯ ಸದರಿ ಪಾಸಪುಸ್ತಕ ಸಿಕ್ಕರೆ ಹಾಜರ ಪಡಿಸುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**